# ಅಳಿವಿನ ಅಂಚಿನಲ್ಲಿರುವ ರಂಗಭೂಮಿ (ಬಣ್ಣ ಮಾಸಿದ ಬದುಕು)

**ಶಿವರಾಜ್ ಜಿ [೧] & ಡಾ. ರಾಜಶೇಖರ ಜಮದಂಡಿ [೨]**

[೧] ಸಂಶೋಧನ ವಿದ್ಯಾರ್ಥಿ, ಸಾಮಾಜಿಕ ಮತ್ತು ಮಾನವೀಯತೆ ವಿಭಾಗ ಶ್ರೀನಿವಾಸ ವಿಶ್ವ ವಿದ್ಯಾಲಯ, ಮಂಗಳೂರು.

Email- shivarajuppi1092@gmail.com

[೨] ಸಂಶೋಧನ ಮಾರ್ಗದರ್ಶಕರು. ಶ್ರೀನಿವಾಸ ವಿಶ್ವ ವಿದ್ಯಾಲಯ ಪಾಂಡೇಶ್ವರ ಮಂಗಳೂರು.

Email- rasagna.333@gmail.com

**Area/Section:** Technology Management.
**Type of the Paper:** Explorative Research
**Type of Review:** Peer Reviewed as per |C|O|P|E| guidance.
**Indexed in:** OpenAIRE.
**DOI:** https://doi.org/10.5281/zenodo.7494019
**Google Scholar Citation:** IJPL

**How to Cite this Paper:**
ಶಿವರಾಜ್, ಜಿ., & ರಾಜಶೇಖರ ಜಮದಂಡಿ, (2022). ಅಳಿವಿನ ಅಂಚಿನಲ್ಲಿರುವ ರಂಗಭೂಮಿ (ಬಣ್ಣ ಮಾಸಿದ ಬದುಕು). *International Journal of Philosophy and Languages (IJPL), 1*(1), 145-150. DOI: https://doi.org/10.5281/zenodo.7494019

**International Journal of Philosophy and Languages (IJPL)**
A Refereed International Journal of Srinivas University, India.

Received on: 18/11/2022
Published on: 31/12/2022

Crossref DOI: https://doi.org/10.47992/IJPL.2583.9934.0008

© With Authors.

This work is licensed under a Creative Commons Attribution-Non-Commercial 4.0 International License subject to proper citation to the publication source of the work.
**Disclaimer:** The scholarly papers as reviewed and published by the Srinivas Publications (S.P.), India are the views and opinions of their respective authors and are not the views or opinions of the SP. The SP disclaims of any harm or loss caused due to the published content to any party.

# ಅಳಿವಿನ ಅಂಚಿನಲ್ಲಿರುವ ರಂಗಭೂಮಿ (ಬಣ್ಣ ಮಾಸಿದ ಬದುಕು)

**ಶಿವರಾಜ್ ಜಿ [೧] & ಡಾ. ರಾಜಶೇಖರ ಜಮದಂಡಿ [೨]**

[೧] ಸಂಶೋಧನ ವಿದ್ಯಾರ್ಥಿ, ಸಾಮಾಜಿಕ ಮತ್ತು ಮಾನವೀಯತೆ ವಿಭಾಗ ಶ್ರೀನಿವಾಸ ವಿಶ್ವ ವಿದ್ಯಾಲಯ, ಮಂಗಳೂರು.

Email- shivarajuppi1092@gmail.com

[೨] ಸಂಶೋಧನ ಮಾರ್ಗದರ್ಶಕರು. ಶ್ರೀನಿವಾಸ ವಿಶ್ವ ವಿದ್ಯಾಲಯ ಪಾಂಡೇಶ್ವರ ಮಂಗಳೂರು.

Email- rasagna.333@gmail.com

## ಮುನ್ನುಡಿ

**ಉದ್ದೇಶ:** *ನಾಟಕ ಕೇವಲ ನಾಟಕ ಮಾತ್ರವಲ್ಲ, ಎಷ್ಟೋ ಜನರ ಬದುಕು, ನಾಟಕ ಎನ್ನುವುದು ಚರಿತ್ರೆ, ಅದೊಂದು ಕಲೆ, ಅದೊಂದು ಸಂಸ್ಕೃತಿ... ಇಷ್ಟೆಲ್ಲವನ್ನು ಹೊಂದಿರುವತಹ ನಾಟಕ ಇಂದು ನಮ್ಮಿಂದ ದೂರವಾಗುತ್ತಿದೆ ಎನ್ನುವುದೇ ನೋವಿನ ಸಂಗತಿ. ಕೇವಲ ನನ್ನಿಂದ ಅಥವಾ ನನ್ನ ಲೇಖನದಿಂದ ಜಗತ್ತು ಬದಲಾವಣೆಯಾಗುತ್ತೆ ಎಂದು ನಾನೂ ಊಹಿಸುವುದಿಲ್ಲ. ಆದರೆ ಈ ನನ್ನ ಲೇಖನದಿಂದ ನಾಟಕ, ರಂಗಭೂಮಿ ಹಾಗೂ ರಂಗಕಲೆಗಳ ಮೇಲೆ ಗೌರವ ಹೆಚ್ಚಾದರೆ ಸಾಕು. ಇದರ ಜೊತೆಗೆ ನಾಟಕ ನೋಡುಗರ ಸಂಖ್ಯೆ, ಓದುಗರ ಸಂಖ್ಯೆ ಹೆಚ್ಚಾದರೆ ಸಾಕು ಎನ್ನುವುದೇ ಈ ನನ್ನ ಕಿರು ಲೇಖನದ ಉದ್ದೇಶ. ಇದರ ಜೊತೆಯಲ್ಲಿ ನಮ್ಮಿಂದ ಹಲವಾರು ಕಲೆ ಸಂಸ್ಕೃತಿಗಳೂ ಕೂಡಾ ನಮ್ಮಿಂದ ದೂರಾ ಆಗುತ್ತಿರುವ ದಿನಗಳು ಸಮೀಪಿಸುತ್ತಿವೆ. ಹೀಗೆ ದಿನ ಕಳೆದರೆ ನಮ್ಮ ಮುಂದಿನ ಪೀಳಿಗೆಗೆ ಕೇವಲ ಕಥೆಗಳು, ಫೋಟೋ ಚಿತ್ರಗಳು ಮಾತ್ರ ಉಳಿಯುತ್ತವೆ ಹೊರತು ನೇರವಾಗಿ ನೋಡಲು ಆಗುವುದಿಲ್ಲ. ನಾಗರೀಕ ಪ್ರಪಂಚದಿಂದ ನಾಟಕ ಎಂಬ ಕಲೆ ಬಹುದೂರ ಸಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದರಿಂದ ನಾವು ಕೇವಲ ಒಂದು ಬಗೆಯ ಮನರಂಜನೆಯನ್ನು ಮಾತ್ರ ಕಳೆದುಕೊಳ್ಳುತ್ತಿಲ್ಲ. ಇದರಿಂದ ನಾವು ನಮ್ಮ ಚರಿತ್ರೆಯನ್ನೂ ಕೂಡಾ ಕಳೆದುಕೊಳ್ಳುತ್ತಿದ್ದೇವೆ, ಇತಿಹಾಸವನ್ನ ಕಳೆದುಕೊಳ್ಳುತ್ತಿದ್ದೇವೆ, ಪರಂಪರೆ, ಆಚಾರ, ವಿಚಾರಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದನ್ನು ಮರೆಯುವಂತಿಲ್ಲ. ರಂಗಭೂಮಿ ನಶಿಸಿಹೋದರೆ ಕೇವಲ ನಾಟಕ ಮಾತ್ರ ನಶಿಸಿಹೋಗುವುದಿಲ್ಲ ಜೊತೆಯಲ್ಲಿ ಒಳ್ಳೆ ಒಳ್ಳೆಯ ರಂಗ ಕರ್ಮಿಗಳು, ನಾಟಕ ರಚನೆಕಾರರು, ತಂತ್ರಜ್ಞಾನರು, ಹೀಗೆ ಹಲವಾರು ಬುದ್ಧಿವಂತ ಜೀವಿಗಳು ನಮ್ಮಿಂದ ದೂರವಾಗಿ ಹೋಗುತ್ತರೆ. ಈಗಾಗಲೇ ಹಲವಾರು ನಾಟಕ ಕಂಪನಿಗಳು ನಮ್ಮಿಂದ ದೂರ ಆಗಿರುವ ಉದಾಹರಣೆಗಳಿವೆ. ಕರ್ನಾಟಕದ ಪ್ರಮುಖ ನಾಟಕ ಕಂಪನಿ ಎಂದರೆ ಗುಬ್ಬಿ ಕಂಪನಿ ಅಂತಹ ದೊಡ್ಡ ಕಂಪನಿಯೇ ನಮ್ಮಿಂದ ದೂರ ಆಗುತ್ತಿರುವಾಗ ಅಂತಹ ಇನ್ನು ಹಲವಾರು ಸಣ್ಣ ಸಣ್ಣ, ನಾಟಕ ಕಂಪನಿಗಳು ದೂರ ಆಗಿರುವ ಎಷ್ಟೋ ಉದಾಹರಣೆಗಳಿವೆ. ಅದರ ಜೊತೆಯಲ್ಲಿ ನಮ್ಮಲ್ಲಿ ಪ್ರಮುಖ ನಾಟಕ ಕಾರರು ಎಂದರೆ ಶ್ರೀರಂಗ, ಚದುರಂಗ, ಕೈಲಾಸಂ, ಕಾರ್ನಾಡರು, ಲಂಕೇಶ್ ರಂತಹ ರಾಷ್ಟ್ರ ಪ್ರಶಸ್ತಿ ಪಡೆದಿರುವಂತಹ ನಾಟಕಕಾರರು ನಮ್ಮಲ್ಲಿ ಇದ್ದುದ್ದನ್ನು ನಾವು ಮರೆಯುವಂತಿಲ್ಲ.*

**ವಿಧಾನ:** *೧) ಪೌರಾಣಿಕ ನಾಟಕ ೨) ಸಾಮಾಜಿಕ ನಾಟಕ ೩) ರಾಜಕೀಯ ನಾಟಕ ೪) ಐತಿಹಾಸಿಕ ನಾಟಕ ೫) ಗದ್ಯ ನಾಟಕ ೬) ಗೀತ ನಾಟಕ ೭) ಏಕಾಂಕ ನಾಟಕ ೮) ಬೀದಿ ನಾಟಕ ೯) ಬೀದಿ ನಾಟಕ ೧೦) ಪ್ರಹಸನ ೧೧) ಯಕ್ಷಗಾನ*

*೧೨) ಹಾಸ್ಯ ನಾಟಕ [೧]*

**ಫಲಿತಾಂಶ:** *ಈ ನನ್ನ ಲೇಖನದ ಫಲಿತಾಂಶ ತುಂಬಾ ಬದಲಾವಣೆಯನ್ನು ನಾನು ಎದುರು ನೋಡುತ್ತೇನೆ. ಈ ನನ್ನ ಲೇಖನದಿಂದ ಒಳ್ಳೆಯ ವಿಮರ್ಶೆಗಳು ಎದುರಾಗಲಿ, ಅಥವಾ ಕೆಟ್ಟ ವಿಮರ್ಶೆ ಎದುರಾಗಲಿ ಆದರೆ, ನಮ್ಮ ನಾಡಿನ ನಾಟಕ ಎಂಬ ಸಂಸ್ಕೃತಿ ಉಳಿಯಲಿ. ಇದನ್ನು ಓದಿದ ಕೆಲವಿಷ್ಟು ಮಂದಿ ಅದನ್ನು ಅರಿತರೆ ಅಷ್ಟೇ ಸಾಕು. ಯಾವುದೇ*

*ಒಂದು ವಸ್ತುವನ್ನು ಎಲ್ಲರೂ ಇಷ್ಟ ಪಡಬೇಕು ಎನ್ನುವಂತಿಲ್ಲ, ಆದರೆ ಕೆಲವಿಷ್ಟು ಜನರಿಗೆ ಇಷ್ಟವಾದಾಗ ನಾಟಕಗಳ ಕಡೆ ಒಲವು ಹೆಚ್ಚಾಗಿ ಅದು ಬೆಳೆಯುವಲ್ಲಿ ಯಶಸ್ವಿಯಾದರೆ ಅಷ್ಟೆ ಸಾಕು.*

**ಮೌಲ್ಯ:** *ನಾಟಕಗಳಲ್ಲಿ ಎಲ್ಲಾ ರೀತಿಯ ಮೌಲ್ಯಗಳನ್ನು ಕೂಡಾ ನಾವು ಕಾಣಬಹುದು, ಒಳ್ಳೆಯದು, ಕೆಟ್ಟದ್ದು, ಹಾಸ್ಯ, ದುಃಖ, ವಿಧ ವಿಧ ತಂತ್ರಜ್ಞಾನ, ನೀತಿ.. ಈ ರೀತಿಯಾಗಿ ಇನ್ನೂ ಬೇರೆ ಬೇರೆ ಮೌಲ್ಯಗಳನ್ನು ನಮಗೆ ನಾಟಕದಲ್ಲಿ ಕಾಣಲು ಇರುತ್ತವೆ.*

**ಪ್ರಕಾರ:** *ಪರಿಕಲ್ಪನಾ ಸಂಶೋಧನಾ.*

**ಪ್ರಮುಖ ಪದಗಳು:** ರಂಗಭೂಮಿ, ನಾಟಕ, ಸಂಸ್ಕೃತಿ, ಕಲೆ, ಸಾಹಿತ್ಯ.

## 1. ಪೀಠಿಕೆ: (BRHKan03)

ನಾಟಕ ಎಂದರೆ ಕಲಾವಿದನು ಪ್ರೇಕ್ಷಕನನ್ನು ನಗಿಸಿ, ಅಳಿಸಿ ಕೇವಲ ಮನರಂಜನೆಯನ್ನು ಮಾತ್ರ ನೀಡುವಂತದ್ದಲ್ಲ, ರಂಗಭೂಮಿ ಎನ್ನುವುದು ಬದುಕು. ಕೆಲವೊಬ್ಬರಿಗೆ ಅದೇ ಜೀವಾಳ. ಇವತ್ತಿನ ದಿನದಲ್ಲಿಯೂ ಕೂಡಾ ನಾಟಕ ಎಷ್ಟೋ ಜನರ ಉಪವಾಸ ನೀಗಿಸುತ್ತಿದೆ. ಎಷ್ಟೋ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ. ಬಣ್ಣವನ್ನೇ ನಂಬಿ ಬದುಕುತ್ತಿರುವ ಸಹಸ್ರಾರು ಜನ ನಾಟಕದ ಗೀಳೀಗೆ ಬಿದ್ದು ಅದರಿಂದ ಸಫಲತೆಯನ್ನು ಕಂಡಿರುವಂತಹವರು ಒಂದೆಡೆಯಾದರೆ, ಅದರಿಂದ ವಿಫಲತೆಯನ್ನು ಹೊಂದಿ ಬದುಕು ಕಳೆದುಕೊಂಡಿರುವಂತಹ ಜನರು ಮತ್ತೊಂದು ಕಡೆ. ರಂಗಭೂಮಿ ಎಂಬ ಪರಿಕಲ್ಪನೆಗೆ ನೂರಾರು ವರ್ಷಗಳ ಇತಿಹಾಸವಿದೆ. ಗ್ರೀಕರು ನಮಗೆ ಅಂತ ಬಳುವಳಿಯಾಗಿ ನೀಡಿದ ಕಲೆ. ಆದರೆ ನೂರಾರು ವರ್ಷಗಳ ಇತಿಹಾಸವಿರುವ ರಂಗಭೂಮಿ ಇಂದು ದಿನೇ ದಿನೇ ಕ್ಷೀಣಿಸುತ್ತಾ ಬರುತ್ತಿದೆ. ರಂಗಭೂಮಿ ಎಂಬ ಕಲೆ ನಶಿಸುತ್ತಿರುವುದನ್ನು ಇಂದು ನಾವು ಕಾಣುತ್ತಿದ್ದೇವೆ. ಇದರ ಜೊತೆಗೆ ಬಣ್ಣ ಹಚ್ಚುತ್ತಿದ್ದ ಕಲಾವಿದರು ಕೂಡಾ ಬರು ಬರುತ್ತಾ ಕಡಿಮೆಯಾಗುತ್ತಿರುವ ಸಂಗತಿಯನ್ನೂ ಸಹ ನಾವು ದಿನೇ ದಿನೇ ಗಮನಿಸುತ್ತಿದ್ದೇವೆ. ಹೇಳುತ್ತಾ ಹೋದರೆ ಕಾರಣಗಳು ಹತ್ತಾರು ನೀಡಬಹುದು ಆದರೆ ಅಂತಿಮವಾಗಿ ಪರಿಣಾಮವೊಂದೇ ಇತ್ತೀಚಿನ ದಿನಮಾನದಲ್ಲಿ ನಾಟಕವು ಕೂಡಾ ನಮ್ಮಿಂದ ದೂರವಾಗುತ್ತಿದೆ. ಅದರಂತೆ ನಾಟಕ ಮಾಡುತ್ತಿದ್ದ ಕಲಾವಿದನೂ ಕೂಡಾ ಬಣ್ಣದ ಬದುಕಿನಿಂದ ದೂರಾವಾಗುತ್ತಿದ್ದಾನೆ. ಕಲೆಗೆ, ಕಲೆಗಾರನಿಗೆ, ಕಲಾವಿದನಿಗೆ ಅಂದು ಸಿಗುತ್ತಿದ್ದ ಗೌರವ ಇಂದು ಸಿಗುತ್ತಿಲ್ಲ. ಮನುಷ್ಯನು ಹಣದ ಹಿಂದೆ ಬಿದ್ದು ತನ್ನನ್ನು ತಾನು ಮಾರಿಕೊಳ್ಳುವ ಸ್ಥಿತಿಗೆ ಬಂದು ನಿಂತಿದ್ದಾನೆ. ಅಂದು ಮನುಷ್ಯ ದುಡ್ಡು ದುಡಿಯಲು ಮುಖಕ್ಕೆ ಬಣ್ಣ ಹಚ್ಚುತ್ತಿದ್ದಆದರೆ ಇಂದು ದುಡ್ಡೇ ಮನುಷ್ಯನನ್ನು ದುಡಿಯುವಂತೆ ಆದ ನಂತರದಲ್ಲಿ ನಾಲಿಗೆಗೆ ಬಣ್ಣ ಹಚ್ಚಲು ಶುರು ಮಾಡಿದ್ದಾನೆ. ಆದ್ದರಿಂದ ಮನುಷ್ಯ ಆಚಾರ, ವಿಚಾರ, ಸಂಸ್ಕೃತಿ, ಪದ್ಧತಿ, ಸಂಬಂಧ ಮೌಢ್ಯತೆ , ಆದರ್ಶ ಎಲ್ಲವನ್ನೂ ಕಳೆದುಕೊಳ್ಳುತ್ತಾ ಬರುತ್ತಿದ್ದಾನೆ.

ಅಂದಿನ ಕಾಲದಲ್ಲಿ ರಂಗಭೂಮಿ, ನಾಟಕಗಳು ತುಂಬಾ ಶ್ರೀಮಂತಿಕೆಯಿಂದ ಕೂಡಿದ್ದವು. ಒಂದು ಗ್ರಾಮಕ್ಕೆ ನಾಟಕವಾಡಲು ಬರುತ್ತಿದ್ದಾರೆ ಎಂದರೆ ಸುಮಾರು ಮೈಲಿಗಳಿಂದ ಜನರು ನಾಟಕ ನೋಡಲು ಆಗಮಿಸುತ್ತಿದ್ದರು. ಕುಳಿತುಕೊಳ್ಳಲು ಜಾಗವಿಲ್ಲದಿದ್ದಾಗ ನಿಂತುಕ್ಕೊಂಡು ನಾಟಕ ನೋಡುತ್ತಿದ್ದ ಎಷ್ಟೋ ಉದಾಹರಣೆಗಳನ್ನು ನಾವು ಕೇಳಿದ್ದೇವೆ. ಕುವೆಂಪು ರವರ 'ಮಲೆಗಳಲ್ಲಿ ಮದುಮಗಳು,' ಕಂಬಾರರ 'ಸಂಗ್ಯಾ ಬಾಳ್ಯ' ಗಿರೀಶ್ ಕಾರ್ನಾಡರ 'ತುಘಲಕ್' ಮುಂತಾದ ಜನಪ್ರಿಯ ನಾಟಕಗಳು ನೂರಾರು ಪ್ರದರ್ಶನ ಕಂಡಿರುವುದನ್ನು ನಾವು ಓದಿದ್ದೇವೆ. ಆದರೆ ಪ್ರಸ್ತುತ ದಿನಮಾನಗಳಲ್ಲಿ ನಾಟಕಗಾರರ ಜೀವನ ಹರಿದ ಬಟ್ಟೆಯಂತೆ ಚಿಂದಿ, ಚಿಂದಿಯಾಗಿದೆ. ಕಲಾವಿದರ ಬದುಕನ್ನು ಕೇಳುವವರಿಲ್ಲದೆ ಬೀದಿಗೆ ಬಿದ್ದಂತಾಗಿದೆ. ರಂಗಭೂಮಿ ಬಡವಾಗಲು ಹಲವಾರು ಕಾರಣಗಳಿವೆ.

## 2. ರಂಗಭೂಮಿ ನಶಿಸಲು ಕಾರಣಗಳು:

### 2.1 ಜನರನ್ನು ಆಕರ್ಷಿಸಿದ ಬಣ್ಣ ಬಣ್ಣದ ಸಿನಿಮಾ ಜಗತ್ತು:

ಹೌದು, ಈ ಮಾತು ಅಕ್ಷರಸಹ ಸತ್ಯ. ಮನುಷ್ಯ ದಿನ ಕಳೆದಂತ ಬಣ್ಣದ ಲೋಕಕ್ಕೆ ಮಾರು ಹೋಗುತ್ತಿದ್ದಾನೆ. ವೇದಿಕೆ ಮೇಲೆ ಕಾಣುವ ನಾಟಕಕ್ಕಿಂತ, ತೆರೆಮೇಲೆ ಕಾಣುವ ಸಿನಿಮಾಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾನೆ. ಸಿನಿಮಾ ಜಗತ್ತು ಅತಿವೇಗವಾಗಿ ಮನುಷ್ಯನನ್ನು ಆಕರ್ಷಿಸುವಲ್ಲಿ ಯಶಸ್ವಿಗೊಳಿಸಿದೆ. ಆದರೆ ಒಂದನ್ನು ಮರೆಯಬಾರದು, ರಂಗಭೂಮಿ ಇಂದ ಸಿನಿಮಾನೆ ಹೊರತು, ಸಿನಿಮಾದಿಂದ ರಂಗಭೂಮಿಯಲ್ಲ [೨].

**2.2 ನಾಟಕ ನೋಡಲು ಜನರಲ್ಲಿ ಉಂಟಾದ ನಿರುತ್ಸಾಹತೆ:**

ಮೇಲೆ ತಿಳಿಸಿದಂತೆ ಮನುಷ್ಯ ಹಣ ಸಂಪಾದಿಸುವ ವೇಗದಲ್ಲಿ ಒಳ್ಳೆ ಒಳ್ಳೆ ಅಭಿರುಚಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಮೊದಲೆಲ್ಲಾ ಜನರು ತಮ್ಮ ಬಿಡುವಿನ ವೇಳೆಯಲ್ಲಿ ಅಥವಾ ಊರಿನ ಜಾತ್ರೆ ಸಂದರ್ಭಗಳಲ್ಲಿ ನಾಟಕಗಳನ್ನು ನೋಡಲು ಹಾತೊರೆಯುತ್ತಿದ್ದರು. ಆದರೆ ಇಂದು ಅದೇ ಗ್ರಾಮ ಹಬ್ಬಗಳ ಸಂದರ್ಭದಲ್ಲಿ ಚಿತ್ರ ಮಂದಿರಗಳ ಕಡೆ ಮುಖಮಾಡುತ್ತಾರೆ. ನಾಟಕ ವೆಂದರೆ ಬೆಳಗಾನ ಯಾರು ನಿದ್ದೆಗೆಡುತ್ತಾರೆ ಎಂದು ಮೂಗು ಮುರಿಯುತ್ತಾರೆ. ಈ ರೀತಿಯಾಗಿ ರಂಗ ಕಲಾವಿದರು ಇನ್ನು ಹಲವಾರು ರೀತಿಯ ಸಂಕಷ್ಟಗಳು ಎದುರಾಗುತ್ತವೆ. ಆ ರೀತಿಯಾಗಿ ಹೇಳುತ್ತಾ ಹೋದರೆ ತುಂಬಾ ಉದಾಹರಣೆಗಳು ನಮ್ಮ ಕಣ್ಣೆದುರಿಗೆ ಬರುತ್ತವೆ. ಅಕಸ್ಮಾತ್ ಒಂದು ವೇಳೆ ಮಳೆ ಬಂದರೆ ಅವತ್ತಿನ ದಿನ ನಾಟಕ ರದ್ದಾದರೂ ಸಹ ವೆಚ್ಚವಂತು ಭರಿಸಲೇಬೇಕಾಗುತ್ತದೆ. ಆದರೆ ಇತ್ತೀಚಿನ ದಿನ ಮಾನಗಳಲ್ಲಿ ರಂಗಭೂಮಿ ಅವರು ಎದುರಿಸಿದ ತುಂಬಾ ಕಷ್ಟದ ಸಮಯ ಅಂದರೆ ಕೊರೋನಾದ ಸಮಯ. ಕೊರೋನಾ ಎಂಬ ಭೀಕರತೆಯಿಂದ ಪ್ರಪಂಚವೇ ತಲ್ಲಣಗೊಂಡಿತು ಅದರಂತೆ ರಂಗಭೂಮಿಯು ಕೂಡಾ ನಲುಗಿಹೋಯಿತು. ಇದರಿಂದ ಸಾಲಬಾಧೆಗಳಲ್ಲಿ ಸಿಕ್ಕು ಕಲಾವಿದರು ನರಳಿದರು. ನಾಟಕಗಳು ಪ್ರದರ್ಶನವಾಗುತ್ತಿಲ್ಲ, ಮನೆ ಬಾಡಿಗೆ ಕಟ್ಟಲು ಹಣವಿಲ್ಲ, ಸಾಲ ತೀರಿಸಲಾಗುತ್ತಿಲ್ಲ ಈ ರೀತಿಯಾಗಿ ಹೇಳುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯನ್ನೇ ಮಾಡಬಹುದು. ಅಂದೊಂದು ದಿನ ಗಲ್ಲಿ ಗಲ್ಲಿಗಳಲ್ಲಿ ಇದ್ದ ನಾಟಕ ಕಂಪನಿಗಳು ಇಂದು ಬೆರಳೆಣಿಕೆಯಷ್ಟಾಗಿವೆ. ಹೀಗೆ ನಮ್ಮ ರಂಗಭೂಮಿ ಕಲೆ ಕ್ಷೀಣಿಸುತ್ತಾ ಓದರೆ ಮುಂದೊಂದು ದಿನ ಮುಂದಿನ ಪೀಳಿಗೆಯ ನಮ್ಮ ಮಕ್ಕಳಿಗೆ ಪುಸ್ತಕದಲ್ಲಿ, ಮ್ಯೂಸಿಯಮ್‌ಗಳಲ್ಲಿ, ತೋರಿಸಬೇಕಾಗುತ್ತದೆ. ಪ್ರದರ್ಶನಗಳು ಮುಗಿದ ನಂತರ ನಾಟಕದ ವಸ್ತುಗಳನ್ನು ಒಂದೂರಿನಿಂದ ಇನ್ನೊಂದೂರಿಗೆ ಸಾಗಿಸುವಾಗ ಆಗುವ ಎಡರು ತೊಡರುಗಳು ಮತ್ತು ಆಗುವ ಖರ್ಚು ಈ ಎಲ್ಲವೂ ಕೂಡಾ ಕಲಾವಿದರನ್ನು ಸಂಕಷ್ಟಗಳಿಗೆ ಸಿಲುಕುವಂತೆ ಮಾಡುತ್ತವೆ [೩].

ನಮ್ಮ ನಾಡಿನಲ್ಲಿ ರಂಗಾಯಣ, ನೀನಾಸಂ, ಎನ್ ಎಸ್ ಡಿ, ಬೆನಕ, ಟೆಂಟ್ ಸಿನೆಮಾ ಇನ್ನೂ ಅನೇಕ ಸರ್ಕಾರಿ ರಂಗಶಾಲೆಗಳು ಹಾಗೂ ಸರ್ಕಾರಿಯೇತರ ರಂಗಶಾಲೆಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿವೆ. ಆದರೆ ಅಲ್ಲಿ ಕಲಿತ ಮಕ್ಕಳು ತಮ್ಮ ರಂಗಭೂಮಿ ತರಬೇತಿ ಮುಗಿದ ನಂತರ ಸಿನಿಮಾಗಳ ಕಡೆ ಮುಖ ಮಾಡಿಬಿಡುತ್ತಾರೆ ಇದು ರಂಗಭೂಮಿಯ ದುರಂತವೇ ಸರಿ. ಇದರಿಂದಾಗಿ ವೃತ್ತಿ ರಂಗಭೂಮಿಯಲ್ಲಿ ಕಲಾವಿದರ ಕೊರತೆ ಉಂಟಾಗುತ್ತದೆ.

ಹೊಟ್ಟೆಪಾಡಿಗೆ ಯಾವುದೋ ಒಂದು ಕೆಲಸ ಮಾಡಿಕೊಂಡಿದ್ದು ರಂಗಕಲೆಯನ್ನು ತಮ್ಮೊಳಗಿನ ಪ್ರತಿಭಾ ಪ್ರದರ್ಶನಕ್ಕೆ ಹವ್ಯಾಸವಾಗಿ ರೂಢಿಸಿಕೊಂಡವರು ಆಧುನಿಕ ರಂಗಭೂಮಿಯನ್ನು ಸಮೃದ್ಧವಾಗಿಯೇ ಕಟ್ಟಿದರು. ಸಿಜಿಕೆ, ಆರ್.ನಾಗೇಶ್, ಸಿ.ಆರ್. ಸಿಂಹ, ಜಿ. ಲೊಕೇಶ್ ಮುಂತಾದ ರಂಗಕರ್ಮಿಗಳೇ ಇದಕ್ಕೆ ಉದಾಹರಣೆ. ಆದರೆ ಯಾವಾಗ ರಂಗಶಿಕ್ಷಣ ಪಡೆದುಬಂದ ಕೆಲವರು ರಂಗಕಾಯಕವನ್ನೇ ವೃತ್ತಿಯನ್ನಾಗಿಸಿಕೊಂಡರೋ ಆಗ ಬದುಕಿಗೆ ರಂಗಭೂಮಿಯಲ್ಲೇ ಆದಾಯದ ಮೂಲಗಳನ್ನು ಹುಡುಕತೊಡಗಿದರು. ಉದ್ಯಮವಾಗದ ರಂಗಭೂಮಿ ಎಷ್ಟು ದಿನವೆಂದು ಇಂತಹ ಪ್ರತಿಭಾವಂತರನ್ನು ಪೊರೆಯಲು ಸಾಧ್ಯ? ಕಲಾವೃತ್ತಿಯವರು ಸರಕಾರಿ ಅನುದಾನ ಪ್ರಾಯೋಜನೆಗಳನ್ನೇ ನಂಬಿಕೊಂಡು ಕುಟುಂಬ ನಿರ್ವಹಿಸಲು ಸಾಧ್ಯವಾ? ಈಗ ಆಗಿದ್ದೂ ಇದೇ. ಬದಲಾದ ಸರಕಾರಿ ನಿಯಮಗಳಿಂದಾಗಿ ಅನುದಾನ ಬಹುತೇಕ ನಿಂತೇ ಹೋಯಿತು. ನಂತರ ಕೊರೋನಾದಿಂದಾಗಿ ರಂಗಚಟುವಟಿಕೆಗಳು ನಿಂತೇ ಹೋದವು. ರಂಗವೃತ್ತಿಯನ್ನೇ ನಂಬಿದವರ ಬದುಕು ಅತಂತ್ರವಾಯಿತು. ಆಧುನಿಕ ಹವ್ಯಾಸಿ ರಂಗಭೂಮಿಯನ್ನು ವೃತ್ತಿಯಾಗಿ ಪರಿಗಣಿಸಿದ ಪರಿಣಾಮವಿದು. ಅತ್ತ ವೃತ್ತಿರಂಗಭೂಮಿಯವರ ಹಾಗೆ ಜನಾಶ್ರಯವನ್ನೂ ಪಡೆಯದೇ, ಇತ್ತ ರಾಜಾಶ್ರಯ (ಸರಕಾರ) ದ ಸೌಲಭ್ಯಗಳೂ ಸಕಾಲಕ್ಕೆ ಸಿಗದೇ ನವವೃತ್ತಿ ರಂಗಕಲಾವಿದರು ಕಂಗಾಲಾದರು. "ಈ ಕಲೆ, ಸಾಹಿತ್ಯಗಳಿಗಿಂತಲೂ ಬದುಕು ದೊಡ್ಡದು ಕಣ್ಲಾ" ಎನ್ನುವ ಸಿಜಿಕೆಯವರ ಮಾತು ಈಗಲೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ. ಸಿಜಿಕೆ ಅವರ ಈ ಮಾತು ಅಕ್ಷರಶಃ ಸತ್ಯ ಯಾಕೆ ಅಂದರೆ ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೆ ಬದುಕು ತುಂಬಾ ಆ ಬದುಕಿನ ಜೊತೆಗೆ ನಮ್ಮ ನಾಡಿನ ಕಲೆ ಸಂಸ್ಕೃತಿ ಉಳಿಯಬೇಕದರೆ ನಮ್ಮ ಸರ್ಕಾರ ಕಿಂಚಿತ್ತಾದರೂ ಅವರಿಗೆ ಆರ್ಥಿಕ ಸಹಾಯ ಮಾಡಿದರೆ ಮಾತ್ರ ಕಲಾವಿದ ತಕ್ಕ ಮಟ್ಟಿನ ಬದುಕು ಕಟ್ಟಿಕೊಳ್ಳಲು ಸಾಧ್ಯ. ಗ್ರಾಮೀಣಭಾಗದಲ್ಲಿ ಯಕ್ಷಗಾನ ಕ್ಷೇತ್ರ, ನಾಟಕ ರಂಗ, ಗೊಂಬೆಯಾಟ, ಹಗಲು ವೇಷ, ಇತರ ರಂಗ ಚಟುವಟಿಕೆಗಳನ್ನು ನಡೆಸುವ ಕಲಾವಿದರಿಗೆ ಕಲೆಯ ಪ್ರಸ್ತುತಿ ಇಲ್ಲದೆ ಆದಾಯ ಇಲ್ಲ. ಕಲಾವಿದ ಬದುಕಬೇಕೆಂದರೆ ಕಲೆಯ ಪ್ರಸ್ತುತಿಯಾಗಬೇಕು. ಎಷ್ಟೋ ದಿನಗಳಿಂದ ಕಲಾ ಪ್ರದರ್ಶನವಿಲ್ಲದೆ ಕುಟುಂಬವನ್ನು ನಿಭಾಯಿಸಲಾರದೆ ಸಂಕಷ್ಟ ಅವರಲ್ಲಿ ಮನೆ ಮಾಡಿದೆ.

### 3. ರಂಗಭೂಮಿಯ ಕಿರು ಪರಿಚಯ:

ಆಧುನಿಕ ಕನ್ನಡ ರಂಗಭೂಮಿಯ ನಡುವಿನ ತಾತ್ವಿಕ ನಿಲುವುಗಳ ನಡುವೆ ಬಹಳ ಕಾಲವಿದ್ದ ಖಿನ್ನತೆಯನ್ನು ಒಂದು ಮುಖ್ಯ ಕಾರಣವಾಗಿಸಬಹುದು. ರಂಗ ಚಳುವಳಿಯ ದೃಷ್ಠಿಯಿಂದ ಮುಖ್ಯವೆನಿಸಿದ ಆಧುನಿಕ ಆಧುನಿಕ ಕನ್ನಡ ರಂಗಭೂಮಿಯು ಹೆಚ್ಚಾಗಿ ಗುರುತಿಸಿಕೊಂಡಿದ್ದು ನವ್ಯ ಸಾಹಿತ್ಯ ಧಾರೆಯ ಜೊತೆಗೆ ನವೋದಯ ಸಾಹಿತ್ಯದ ಕುರಿತು ನವ್ಯವು ರೂಪಿಸಿಕೊಂಡಿದ್ದು ಬಹುತೇಕ ನೇತ್ಯಾತ್ಮಕ ಅಭಿಪ್ರಾಯ ಆಗಿನ ಸಮಕಾಲೀನ ರಂಗಭೂಮಿಯದು ಆಗಿತೆನ್ನುವುದು ನಿಜ. ರಂಗಭೂಮಿ ಅರ್ಥ ಪೂರ್ಣ ಅನುಸಂಧಾನವನ್ನು ನಡೆಸಬಲ್ಲ ಸಾಮರ್ಥ್ಯವನ್ನು ತಲುಪುವ ಹೊತ್ತಿಗೆ ಸರಿಯಾಗಿ ಅದರ ಕನಸುಗಳು ದೊಡ್ಡದಾಗಿ ಬೆಳೆಯಲು ತೊಡಗಿ ಅದು ಇದ್ದಕ್ಕಿದ್ದಂತೆ ತನ್ನ ದಿಕ್ಕು ದೆಸೆಗಳನ್ನು ಬದಲಿಸಿಬಿಟ್ಟಿತು. ಅತ್ತ ಪಶ್ಚಿಮದಲ್ಲಿ ಪ್ರಭಾವಿಯಾಗಿದ್ದ ರಂಗ ಸಿದ್ಧಾಂತಗಳ ಕುರಿತು ಬೆರಗುಗೊಂಡು, ಇತ್ತ ಬೇರುಗಳನ್ನು ಹುಡುಕುವ ಎಂದು ಭಾರತೀಯ ಅಭಿಜಾತ ರಂಗ ಪರಂಪರೆಯೊಂದನ್ನು, ತನ್ನ ಚಹರೆಯನ್ನು ಅದಕ್ಕೆ ಅನುಗುಣವಾಗಿ ರೂಪಿಸಿಕೊಳ್ಳಲು ಕನ್ನಡ ರಂಗಭೂಮಿಯು ಹೊರಟಿತು. ಹುಡುಕಾಟವು ದೇಶದ ಎಲ್ಲಾ ಭಾಷೆಯ ರಂಗಭೂಮಿಗಳಲ್ಲೂ ಆಗುತ್ತಿದ್ದುದ್ದನ್ನು ಇಲ್ಲಿ ಗಮನಿಸಬೇಕು. ಈ ಕಾರಣದಿಂದಾಗಿ ಇತ್ತ ಆಧುನಿಕವೂ ಎನಿಸದ ಅತ್ತ ಅಭಿಜಾತವೂ ಎನಿಸದ ಸ್ವರೂಪದಲ್ಲಿದ್ದ ನಾಟಕಗಳು ಕನ್ನಡ ರಂಗಭೂಮಿಯ ಪಾಲಿಗೆ ಕೇವಲ ಸಾಹಿತ್ಯ ಕೃತಿಗಳಾಗಿಯೇ ಉಳಿದವು [೪].
ಕನ್ನಡ ರಂಗಭೂಮಿಯ ಪ್ರಕ್ರಿಯೆಗಳು ಶುರುವಾಗಿ ಈಗಾಗಲೇ ಐದಾರು ದಶಕಗಳೇ ಸಂಧಿವೆ. ಕನ್ನಡ ರಂಗಭೂಮಿಯು ತನ್ನನ್ನು ರೂಪಿಸಿಕೊಳ್ಳಲು ಪಾಶ್ಚಿಮಾತ್ಯ ಹಾಗೂ ಭಾರತೀಯ ಅಭಿಜಾತ ದಾರಿಗಳನ್ನು ಹಿಡಿದು, ಈಗಾಗಲೇ ಆ ದಾರಿಯಲ್ಲಿ ಒಂದಷ್ಟು ದೂರಾ ಸಾಗಿದೆ. ತಾನು ಹುಡುಕಿ ಹೊರಟ ರಂಗ ಪರಂಪರೆಗಳನ್ನು ಹೊರತು ಪಡಿಸಿ ತನ್ನ ನೆಲದಿಂದಲೇ ಪಡೆದುಕೊಳ್ಳಬಹುದಾಗಿದ್ದ ರಂಗ ಕಲ್ಪನೆಗಳನ್ನು ಗ್ರಹಿಸುವಲ್ಲಿ ಕನ್ನಡ ರಂಗಭೂಮಿಯು ಎಡವಿರುವುದು, ಈಗೀಗ ರಂಗ ಕರ್ಮಿಗಳ ಅನುಭವಕ್ಕೆ ಬರುತ್ತಿದೆ ಎಂಬ ಸೂಚನೆಗಳು ಸಿಗಲಾರಂಭಿಸಿವೆ. ಈ ಲಭ್ಯ ಮಾದರಿಗಳಿದ ಬಿಡಿಸಿಕೊಳ್ಳುವ ಪ್ರಯತ್ನವು ಮೊದಲು ಚಿಂತನೆಯ ಮೂಲಕ, ನಂತರ ಚರ್ಚೆಯ ಮೂಲಕ ನಡೆದು ಮುಂದಿನ ಹಂತದಲ್ಲಿ ರಂಗಭೂಮಿಯ ಮೇಲೆ ಕಾಣಿಸಿಕೊಳ್ಳಬಹುದೇನೋ ಇಂತಹ ಪ್ರಯತ್ನದ ಮೊದಲ ಹೆಜ್ಜೆಯಾಗಿ ಈ ಅಧ್ಯಯನವನ್ನು ಗುರುತಿಸಿಕೊಳ್ಳಬಹುದು. ಏಕ ಕಾಲದಲ್ಲಿ ನಾಟಕಗಳನ್ನು ಸಾಹಿತ್ಯದ ದೃಷ್ಠಿಯಿಂದ ಪ್ರವೇಶಿಸಬೇಕಾಗಿದೆ. ಕೆಲವೊಂದಿಷ್ಟು ನಾಟಕಗಳು ಗಮನಿಸಬೇಕಾದ ಮೊದಲನೇ ಸವಾಲು ಇದೇ ಆಗಿರುವುದರಿಂದ ಕೆಲವೊಂದು ತಾತ್ವಿಕ ಪರಿಕರಗಳನ್ನು ಬಳಸಿಕೊಂಡು ಈ ಸವಾಲನ್ನು ಮೀರಲು ಪ್ರಯತ್ನಿಸಬಹುದು. ಈ ಅಧ್ಯಯನದ ಅಂತಿಮ ಉದ್ದೇಶಗಳೇನೇ ಎದ್ದರೂ ಅದು ಮೂಲತಃ ಸಾಹಿತ್ಯ ವಿಮರ್ಶೆಯಾಗಿಯೇ ವಿಚಾರ ಪ್ರವೇಶ ಮಾಡಬೇಕಾಗಿರುವುದು ಇಲ್ಲಿ ಅನಿವಾರ್ಯ ಜಗತ್ತಿನ ಯಾವುದೇ ಕಲೆಯ ವಿಮರ್ಶೆಯನ್ನು ಸಾಹಿತ್ಯ ವಿಮರ್ಶೆಯ ಪರಿಕರಗಳಿಂದಲೇ ನಡೆಸಬಹುದು [೫].

### 4. ಉಪಸಂಹಾರ:

ಕಲೆ ಎನ್ನುವುದು ಎಲ್ಲರಿಗೂ ಒಲಿಯುವಂತಹ ವಿಧ್ಯೆಯಲ್ಲ. ಅದು ತಪಸ್ಸು. ಆ ರೀತಿಯ ಭಾರತೀಯ ಕಲೆಯನ್ನು ಉಳಿಸಿಕೊಳ್ಳುವ ಜವಬ್ದಾರಿಯನ್ನು ನಾವೆಲ್ಲರೂ ಹೊತ್ತುಕೊಂಡು ಅದನ್ನು ಜವಾಬ್ದಾರಿಯಿಂದ ಕಾಪಾಡಿಕೊಳ್ಳಬೇಕು. ಅದರಂತೆ ರಂಗಭೂಮಿಯು ಕೂಡಾ ಇಂದು ಅಳಿವಿನ ಅಂಚಿಗೆ ಹೋಗುತ್ತಿದೆ ಅದನ್ನು ಉಳಿಸುವುದು ನಮ್ಮ ಕರ್ತವ್ಯವಾಗಿದೆ ಹಾಗಾಗಿ ಇದಕ್ಕೆ ನಾವೆಲ್ಲರೂ ಒಕ್ಕೊರಲಿನಿಂದ ಕೈ ಜೋಡಿಸಬೇಕು. ಕೆಲವೊಮ್ಮೆ ನಮಗೆ ಆಗದೇ ಹೋದಾಗ ಮಾಡುವವರಿಗೆ ಪ್ರೋತ್ಸಾಹ ನೀಡಿ, ನಮ್ಮ ಕೈಲಾದ ಸಹಾಯ ಮಾಡುವುದು ನಮ್ಮ ಕರ್ತವ್ಯವಾಗಿದೆ. ನಾಟಕಗಳ ಮೇಲೆ ನಮ್ಮಲ್ಲಿರುವಂತಹ ಹಲವಾರು ರಂಗ ಕರ್ಮಿಗಳು ಬಹಳಷ್ಟು ಕೆಲಸಗಳನ್ನು ಮಾಡಿ ನಮಗೆ ನೀಡಿಹೋಗಿದ್ದಾರೆ. ನಮ್ಮಿಂದ ಅದನ್ನು ಮಾಡಲು ಆಗುವುದಿಲ್ಲ, ಆದರೆ ಅದನ್ನು ಉಳಿಸಿಕೊಳ್ಳುವ ಕನಿಷ್ಠ ಪ್ರಯತ್ನವಾದರೂ ಮಾಡಬೇಕು. ಪ್ರತಿಯೊಂದು ಸಮಸ್ಯೆಗೂ ಪರಿಹಾರ ಇದ್ದೇ ಇರುತ್ತದೆ. ನಮ್ಮ ರಂಗಭೂಮಿಗು, ರಂಗಭೂಮಿ ಕಲಾವಿದರ ಸಮಸ್ಯೆಗೂ ಘನ ಸರ್ಕಾರ ತಕ್ಕ ಮಟ್ಟಿನ ಸಮಸ್ಯೆಯನ್ನಾದರೂ ಬಗೆ ಹರಿಸಲಿ ಎನ್ನುವುದು ನಮ್ಮ ಕೋರಿಕೆ. ಮುಂದಿನ ದಿನಗಳಲ್ಲಾದರೂ ನಮ್ಮ ಜನ ನಾಟಕಗಳ ಕಡೆ ಮುಖ ಮಾಡಿ ನಮ್ಮ ಕಲಾವಿದರನ್ನು ಹಾಗೂ ಕಲೆಯನ್ನು ಉಳಿಸಲಿ ಎನ್ನುವುದು ನಮ್ಮ ಆಶಯ. ನಾಟಕಗಳಲ್ಲು ಕೂಡಾ ಹೊಸ ಹೊಸ ತಂತ್ರಜ್ಞಾನದ ಬಳಕೆಯಿಂದ ಅವು ಕೂಡಾ ಜನರನ್ನು ಆಕರ್ಷಿಸುವ ಪ್ರಯತ್ನ ಮಾಡುತ್ತಿದ್ದಾವೆ [೬].

**ಆಕರ ಗ್ರಂಥ:**

[೧] ಡಾ ಎಚ್ ಕೆ ರಂಗನಾಥ್ (೧೯೭೮) ನಾಟಕ ರಂಗಭೂಮಿ, ಹೇಮಂತ ಸಾಹಿತ್ಯ ಬೆಂಗಳೂರು. ೧-೨೦೦.

[೨.] ಉತ್ಥಾನ್ ಭಾಘಾಟ್ (೨೦೧೬), ಕುವೆಂಪು ಮುಂದಿಡುವ ರಂಗ ಕಲ್ಪನೆ, ಕುವೆಂಪು ಭಾಷಾ ಭಾರತಿ ಪ್ರಾಧೀಕಾರ, ಬೆಂಗಳೂರು. ೧-೧೮೦.

[೩.] ದಾಮೋದರ ಶೆಟ್ಟಿ (೨೦೨೧) ರಂಗ ಚಿತ್ರ ರಂಗ, ಶ್ರೀನಿವಾಸ ಪ್ರಕಾಶನ. ೧-೧೨೦.

[೪] ಡಾ. ಕೆ ಮರುಳ ಸಿದ್ದಪ್ಪ (೧೯೮೩) ಆಧುನಿಕ ಕನ್ನಡ ನಾಟಕ, ಅಂಕಿತ ಪ್ರಕಾಶನ. ೧-೧೫೦.

[೫] ಹಂಚಿಮನೆ ವೀರಭದ್ರಪ್ಪ (2009) ರಂಗಭೂಮಿ ಸಾಹಿತ್ಯ ಕಥನ, ಕನ್ನಡ ಸಾಹಿತ್ಯ ಪರಿಷತ್ತು. ೧-೧೦.

[೬] ವಾಸುದೇವಾಚಾರ್ಯ (2006) ನಾ ಕಂಡ ಕಲಾವಿದರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ೬೮-೯೦.

*******